ಶೇಖರನಿಗೊಪ್ಪಿಸಿ ಹೊಸ ಅಡುಗೆ ಭಟ್ಟನನ್ನು ಹುಡುಕಲು ದತ್ತ ನಾಯ್ಕ ಘಟ್ಟದ ಮೇಲೆ ಹೊರಟುಬಿಡುತ್ತಿದ್ದ. ಪುರು ಅಂಗಡಿಯಲ್ಲಿ ಇದ್ದರೂ ಸರಿಯೇ, ಇರದಿದ್ದರೂ ಸರಿಯೇ. ಬರೀ ಕುಟ್ಟಪ್ಪನಿಗೆ ಮಾತ್ರವಲ್ಲ, ರಾತ್ರಿ ಬರುತ್ತಿದ್ದ ತರಕಾರಿ, ಹಣ್ಣಿನ ವ್ಯಾಪಾರಿಗಳು ತಂದುಕೊಡುತ್ತಿದ್ದ ಸ್ವಲ್ಪ ಕೆಟ್ಟೆಯಾದ, ಒಂದು ಬದಿ ಕೊಳೆತ, ಗುಪ್ಪೆಗಳಡಿಯಲ್ಲಿ ಅಜಬಜಕಲಾಗಿ ಮಾರಾಟವಾಗದೆ ಉಳಿದ ಹಣ್ಣು ಹಾಗೂ ತರಕಾರಿಗಳನ್ನು ಅದರದರ ಅವಸ್ಥೆ ನೋಡಿ, ಅದಕ್ಕೆ ತಕ್ಕಂತೆ ಸರಿಯಾದ ರೇಟು ಹಾಕಿ, ಅಡುಗೆ ಕೋಣೆಯಲ್ಲಿ ಗೋದನೆ ಹಾಕಿ ವ್ಯವಹಾರ ಚುಕ್ತಾ ಮಾಡಿ ಕಳಿಸುತ್ತಿದ್ದವನೂ ಶೇಖರನೇ.

'ಮುಕಳಿ ಕೊಳೆತ ಅನಾನಸು ಕೇಜಿಗೆ ಹತ್ತು ರೂಪಾಯಿ ಅಂದ್ರೆ ಸಿಕ್ಕಾಪಟ್ಟೆ ತುಟ್ಟಿ ಆಯ್ತು. ಕೇಜಿಗೆ ಐದಕ್ಕಿಂತ ಒಂದು ನಯಾಪೈಸೆ ಹೆಚ್ಚಿಲ್ಲ. ಅಡ್ಡಿಲ್ಲ ಹೇಳಾದ್ರೆ ಬರ್ಮಾಡು, ಇಲ್ದಿದ್ರೆ ಬ್ಯಾಡಾ. ಹೊತಾಕುವ ಹಣ್ಣು ನಿಂದು, ಅದ್ಕೆ ಇಷ್ಟದ್ರೂ ರೇಟು ಯಾರು ಕೊಡೂರು?' ಅಂತ ಸಟಕ್ಕನೆ ಕಡ್ಡಿ ತುಂಡು ಮಾಡಿದಂತೆ ಹೇಳಿ ಬೇರೆ ಬದಿಗೆ ಮುಖ ತಿರುಗಿಸಿಬಿಡುತ್ತಿದ್ದ; ಹಣ್ಣಿನವನೇ ಬೇರೆ ಗತಿಯಿಲ್ಲ ಎಂದು ಸುರವಿ ಹೋಗಬೇಕು, ಹಾಗೆ.

ದತ್ತ ನಾಯ್ಕ ಕೇಜಿಗೆ ಎಂಟು ಹಾಕಿ ಕೊಟ್ರೆ, ಶೇಖರ ಅಂಗಡಿಯಲ್ಲಿ ಕೂತರೆ ಕೊಳೆತ ಅನಾನಾಸಿಗೆ ಐದು ದಾಟುತ್ತಲಿರಲಿಲ್ಲ. ಬರೀ ಅನಾನಾಸು ಅಂತಷ್ಟೇ ಅಲ್ಲ ಯಾವುದಾದ್ರೂ ಸರಿಯೇ, ವ್ಯಾಪಾರ ಅಂದ್ರೆ ಬಹಳ ಹಿಡಿತದ ವ್ಯಾಪಾರ ಶೇಖರನದು.

ಪುರುವಿನ ಅವ್ವ ಶೀತು ಮಾತ್ರ ಶೇಖರ ಹೋಟೆಲು ವಿಷಯದಲ್ಲಿ ಇಷ್ಟೆಲ್ಲಾ ತಲೆಹಾಕಿ, ಮೂಗುತೂರಿಸುವುದನ್ನು ಇಷ್ಟಪಡುತ್ತಿರಲಿಲ್ಲ. ದಂಧೆಯ ಎಲ್ಲಾ ಗುಟ್ಟನ್ನು ಬಹಿರಂಗ ಮಾಡಬಾರದು ಎಂಬುದು ಒಂದು ಲೆಕ್ಕವಾದರೂ ಶೇಖರನ ಅಪ್ಪ ಗಂಗಾಧರನ ಹಪ್ಪಳದ ವ್ಯಾಪಾರ ಡಲ್ಲು ಹೊಡೆಯುತ್ತಿದೆ ಎಂಬ ಗಾಳಿಮಾತಿಗೆ ಸಿಲುಕಿ ಬಗೆಬಗೆಯ ಸಲ್ಲದ ಕಲ್ಪನೆಯ ಗೂಡಿನಲ್ಲಿ ಯಾವತ್ತೂ ಸಂಶಯದಿಂದಲೇ ದಿನ ಕಳೆಯುತ್ತಿದ್ದಳು ಶೀತು. ಎಲ್ಲಿಯಾದರೂ ಅಪ್ಪಮಗ ಸೇರಿ ದುಡ್ಡನ್ನೇನಾದರೂ ಲಪಟಾಯಿಸಿದರೆ!! ಅಥವಾ ವ್ಯಾಪಾರದ ಗುಟ್ಟನ್ನೆಲ್ಲ ಅರಿತು ತಮಗೇ ಒಂದು ದಿನ ಎದುರಾಳಿಯಾಗಿ ನಿಂತರೆ!! ದತ್ತಾತ್ರೇಯನ ಕೃಪೆಯಿಂದ ಮದುವೆಯಾಗಿ ಹದಿಮೂರು ವರ್ಷದ ಮೇಲೆ ಹುಟ್ಟಿದವನಾದರೂ ಈ ಪುರು ವ್ಯವಹಾರದಲ್ಲಿ ಹಿಂದೆ ಬೀಳುವುದು ಶೀತುವಿಗಂತೂ ಗಂಟಲಲ್ಲಿ ಕಫ ಕಟ್ಟಿದಂತಾಗುತ್ತಿತ್ತು. ಅತ್ತಲಾಗಿ ಗರ್ ಅಂತ ಒಳಗೆಳೆದುಕೊಂಡು ನುಂಗುವಂತಿಲ್ಲ, ಇತ್ತಲಾಗಿ ಎಲ್ಲರೆದುರು ತೂಪುವಂತಿಲ್ಲ. ಆದರೂ ಸಮಯ ಸಿಕ್ಕಾಗ ಸ್ವಲ್ಪ ಸ್ವಲ್ಪವೇ ಮೆಣಸಿನ ಹೊಗೆ ಕಾರುತ್ತಿದ್ದಳು ಶೀತು. 'ಬೆರಳು ಕೊಟ್ಟರೆ ಹಸ್ತ ನುಂಗುವವರು ಯಾರು ಅಂತ ಗುಂಡಿಗೆ ಬಿದ್ದಾಗಲೇ ತಿಳೀಬೇಕು, ನಮ್ ನಮ್ ವ್ಯವಹಾರ ನಮ್ದು. ಬೇರೆಯವ್ರ ನಂಬ್ಕ ಕೂತ್ಗಳ್ಳುದು ಸಮ ಅಲ್ಲಾ. ನನ್ ಮಾತೆಲ್ಲಿ ನಡೀತದೆ ಇಲ್ಲಿ, ಮನೇಲಿ ಇದ್ದದ್ದು ಮೂರೇ ಜನ ಆದ್ರೂ ಕೆಟ್ಟವಳು ಮಾತ್ರ ನಾನೇಯಾ' ಅಂತ ಸಮಯ ಸಿಕ್ಕಾಗಲೆಲ್ಲ ಭರಣಿಯಲ್ಲಿ ಹತ್ತತ್ತಿಟ್ಟ ಉಪ್ಪಿನಕಾಯಿ ಮಿಡಿಯ ಮುಖ ಮಾಡಿಕೊಂಡು ಹೇಳಿಕೊಳ್ಳುತ್ತಿರುತ್ತಿದ್ದಳು.

ಇತ್ತ ಪುರುವಿನ ಮನೆಗೆ ದಾಟಿಸಿದ ಬಂಗಡೆ ಫ್ರೈ ಬೋಗುಣಿ ಖಾಲಿ ವಾಪಸ್ಸು ಬಂದರೆ ಶೇಖರನ ತಾಯಿಗೂ ರೊಯ್ಯನೆ ಪಿತ್ತ ನೆತ್ತಿಗೇರುತ್ತಿತ್ತು, 'ನೀ ಎಷ್ಟೇ ಕೆಲಸ ಮಾಡ್ಕೊಡು, ತಿಪ್ಪರ್ಲಾಗಾನೇ ಹಾಕು ಯಾರಿಗೂ ನೆನೆಗುಣವಿರುವುದಿಲ್ಲ. ಖಾಲಿ ಪಾತ್ರೆಯನ್ನು ಯಾರಾದರೂ ಹಿಂದಿರುಗಿಸುತ್ತಾರಾ? ನಾಲ್ಕು ಹಣ್ಣೋ, ತರಕಾರಿಯನ್ನೋ ಹಾಕಿ ಕೊಟ್ಟರೆ ಅವರ ಗಂಟೇನು ಹೋಗ್ತಿತ್ತು. ಬಂಗ್ಡೆ ಏನು ನಮ್ಮನೆಯ ತೊಂಡೆಗಿಡಕ್ಕೆ ಬಿಡುತ್ತದೆ ಅಂದ್ಕೊಂಡುಬಿಟ್ಟಿದ್ದಾರೆ ಕಾಣ್ತದೆ. ನಿಮ್ಮಪ್ಪನಿಗೆ ವ್ಯಾಪಾರದಲ್ಲಿ ಸಹಾಯ ಮಾಡುದು ಬಿಟ್ಟು ಕಾಸಿನಕಡ್ಡಿ ಪ್ರಯೋಜನವಿಲ್ಲದವರ ಮನೆ ಹೋಟೆಲಿನಲ್ಲಿ ನಾಯಿಯ